# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಾಗಡಿ.

**ಅಪರಾಧಿಕ ಪ್ರಕರಣ ಸಂಖ್ಯೆ : 752/2017**

ದೂರುದಾರರು : ಕರ್ನಾಟಕ ಸರ್ಕಾರ
ಆರಕ್ಷಕರು, ಮಾಗಡಿ ಠಾಣೆ.

ವಿರುದ್ಧ

ಆರೋಪಿತರು : ಎ 1 ಗಂಗಯ್ಯ ಬಿನ್ ಮುದ್ದಯ್ಯ,
ಸುಮಾರು 65 ವರ್ಷಗಳು.

ಎ 2 ಶಿವನಂಜಮ್ಮ ಕೋಂ ಗಂಗಯ್ಯ,
ಸುಮಾರು 60 ವರ್ಷಗಳು.

ಎ 3 ನಂಜುಂಡಪ್ಪ ಬಿನ್ ಗಂಗಯ್ಯ,
ಸುಮಾರು 30 ವರ್ಷಗಳು.

ಎ 4 ನಂಜುಂಡಯ್ಯ ಬಿನ್ ಮುದ್ದಯ್ಯ ,
ಸುಮಾರು 65 ವರ್ಷಗಳು.

ಎ 5 ಭದ್ರಮ್ಮ ಕೋಂ ನಂಜುಂಡಯ್ಯ,
ಸುಮಾರು 55 ವರ್ಷಗಳು.

ಎ 6 ನವೀನ್ ಕುಮಾರ್@ ಶಿವನಂಜಯ್ಯ
ಬಿನ್ ನಂಜುಂಡಯ್ಯ,
ಸುಮಾರು 22 ವಷಗಳು.

ಎ 7 ನಂಜಯ್ಯ ಬಿನ್ ನಂಜುಂಡಯ್ಯ,
ಸುಮಾರು 27 ವರ್ಷಗಳು.

ಎ 8 ಯಡಿಯೂರಪ್ಪ ಬಿನ್ ಬೇಡರಪ್ಪ,
ಸುಮಾರು 60 ವರ್ಷಗಳು.

ವಾಸ : ಉಡುವವೆಗೆರೆ ಗ್ರಾಮ,
ಕಸಬಾ ಹೋಬಳಿ, ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ.

**<u>ದೋಷಾರೋಪಣೆ</u>**

**(ಶ್ರೀಮತಿ. ಲತಾ .ಜೆ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಆದ ನಾನು ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ದೋಷರೋಪಣೆ ಏನೆಂದರೆ)**

ಮೊದಲನೆಯದಾಗಿ ದಿನಾಂಕ: 17-05-2016 ರ ಬೆಳಿಗ್ಗೆ 10:00 ಗಂಟೆಯ ಸಮಯ ಮಾಗಡಿ ತಾಲ್ಲೂಕು, ಕಸಬಾ ಹೋಬಳಿ, ಉಡುವೆಗೆರೆ ಗ್ರಾಮದ ಬಾಳೆಕಟ್ಟೆಗೆ ಹಾದುಹೋಗುವ ಮಣ್ಣು ರಸ್ತೆ ಪಕ್ಕದಲ್ಲಿರುವ ಸರ್ವೆ ನಂ 137/07 ರಲ್ಲಿರುವ ಚಾ.ಸಾ.-1 ರವರ ವಾಸದ ಮನೆಯ ಬಳಿ, ಆರೋಪಿ-1 ರಿಂದ 8 ಆದ ನೀವುಗಳು ಏಕ ಉದ್ದೇಶದಿಂದ ಏಕಾಏಕಿ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಚಾ.ಸಾ.-1 ರವರ ಜಮೀನಿನಲ್ಲಿ ನ್ಯಾಯಾಲಯದ ಆದೇಶ ಇದ್ದರೂ ಕಾಂಪೌಂಡ್ ಗೋಡೆಯನ್ನು ಕಟ್ಟಲು ಪ್ರಯತ್ನಿಸಿದಾಗ, ಅದನ್ನು ಕೇಳಿದ ಚಾ.ಸಾ-1 ರವರ ಜೊತೆ ಕಾಂಪೌಂಡ್ ಕಟ್ಟುವ ವಿಚಾರವಾಗಿ ಗಲಾಟೆಯನ್ನು ಮಾಡಿದ್ದು, ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ. 143 ಸಹವಾಚಕ ಕಲಂ. 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ ನೀವುಗಳು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಅತಿಕ್ರಮ ಪ್ರವೇಶ ಮಾಡಿ ದೊಂಬಿ ಮಾಡಿದ್ದು, ಚಾ.ಸಾ.-1 ರವರ ಜಮೀನಿನಲ್ಲಿ ಕಾಂಪೌಂಡ್ ಕಟ್ಟುವ ವಿಚಾರವಾಗಿ ಗಲಾಟೆಯನ್ನು ಮಾಡಿದ್ದು, ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ. 147 ಸಹವಾಚಕ ಕಲಂ. 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಮೂರನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ ನೀವುಗಳು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಬಂದು ಅತಿಕ್ರಮ ಪ್ರವೇಶ ಮಾಡಿ ದೊಂಬಿ ಮಾಡಿದ್ದು, ಚಾ.ಸಾ.-1 ರವರ ಜಮೀನಿನಲ್ಲಿ ಕಾಂಪೌಂಡ್ ಕಟ್ಟುವ ವಿಚಾರವಾಗಿ ಗಲಾಟೆಯನ್ನು ಮಾಡಿದ್ದು ಆ ಸಮಯದಲ್ಲಿ ಆರೋಪಿತರಾದ ನೀವುಗಳು ಅಪರಾದಕ್ಕೆ ಉಪಯೋಗಿಸುವ ಮಾರಕ ಅಸ್ತ್ರಗಳಾದ ಮಚ್ಚು, ಇತ್ಯಾದಿಗಳನ್ನು ಹಿಡಿದುಕೊಂಡು ಬಂದಿರುತ್ತೀರಿ, ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ. 148 ಸಹವಾಚಕ ಕಲಂ. 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಡುತ್ತದೆ.

ನಾಲ್ಕನೆಯದಾಗಿ, ಮೇಲಿನ ದಿನಾಂಕದಂದು, ಮೇಲ್ಕಂಡ ದಿನಾಂಕ, ಸಮಯ ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ ನೀವುಗಳು ಚಾ.ಸಾ-1 ರವರ ಸರ್ವೆ ನಂ.137/07 ರಲ್ಲಿರುವ ಜಮೀನಿಗೆ ಅಪರಾಧಗಳನ್ನು ಮಾಡುವ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿದ್ದು, ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ. 447 ಸಹವಾಚಕ ಕಲಂ. 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ಇದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಐದನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ ನೀವೆಲ್ಲರೂ ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಏಕ ಉದ್ದೇಶದಿಂದ ಬಂದು ಆ ಸಮಯದಲ್ಲಿ 4 ನೇ ಆರೋಪಿತರಾದ ನೀವು ಚಾ.ಸಾ-1 ರವರ ಎಡಗೈಯನ್ನು ತಿರುಚಿ ನೋವುಂಟು ಮಾಡಿದ್ದು, ಆನಂತರ ಚಾ.ಸಾ.-1 ಮತ್ತು 2 ರವರಿಗೆ ಕೈಗಳಿಂದ ಗುದ್ದಿ ಕಾಲುಗಳಿಂದ ತುಳಿದು ನೋವುಂಟು ಮಾಡಿದ್ದು, 6 ಮತ್ತು 8 ನೇ ಆರೋಪಿಯವರು ಚಾ.ಸಾ-1 ಮತ್ತು 2 ರವರಿಗೆ ಕೈಗಳಿಂದ ಹೊಡೆದಿದ್ದು, 3 ಮತ್ತು 7 ನೇ ಆರೋಪಿಯವರು ಚಾ.ಸಾ-2 ರವರ ಮರ್ಮಾಂಗಕ್ಕೆ ಬಲವಾಗಿ ಹೊಡೆದು ನೋವುಂಟು ಮಾಡಿದ್ದು ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಆರನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿಗಳಾದ ನೀವೆಲ್ಲರೂ ಅಕ್ರಮವಾಗಿ ಗುಂಪನ್ನು ಕಟ್ಟಿಕೊಂಡು ಏಕ ಉದ್ದೇಶದಿಂದ ಚಾ.ಸಾ.-2 ರವರಿಗೆ 1 ನೇ ಆರೋಪಿಯಾದ ನೀವು ಮಚ್ಚಿನಿಂದ ತಲೆಗೆ ಹೊಡೆದು ರಕ್ತಗಾಯಪಡಿಸಿದ್ದು, ಸದರಿ ಕೃತ್ಯ ಭಾರತೀಯ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರ ರೀತ್ಯ ಶಿಕ್ಷಾರ್ಹ ಅಪರಾಧವಾಗಿದ್ದು ನನ್ನ ಸಂಜ್ಞೆಗೆ ಒಳಪಡುತ್ತದೆ.

ಏಳನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ 1 ರಿಂದ 8 ರವರು ಚಾ.ಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬಾಯಿಗೆ ಬಂದಂತೆ ಬೈದಿದ್ದು, ಅವರನ್ನು ಅವಮಾನಗೊಳಿಸಿ ಸಾರ್ವಜನಿಕ ಶಾಂತಿ ಭಂಗಗೊಳಿಸುವಂತೆ ವರ್ತಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿ-1 ರಿಂದ 8 ರವರು ಚಾ.ಸಾ.-1 ಮತ್ತು ಚಾ.ಸಾ-2 ರವರಿಗೆ ನಿಮ್ಮನ್ನು ಸಾಯಿಸಿ ಇದೇ ಜಮೀನಿನಲ್ಲಿ ಹೂತು ಹಾಕುತ್ತೇವೆ ನಮಗೆ ರಾಜಕೀಯ ಬೆಂಬಲವಿದೆ ಎಂದು ಕೊಲೆ ಬೆದರಿಕೆಯನ್ನು ಹಾಕಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲ 149ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

**ಪ್ರಶ್ನೆ 1 : ದೋಷಾರೋಪಣೆ ಓದಿ ಹೇಳಿದುದು ಅರ್ಥವಾಯಿತೇ?**

**ಆರೋಪಿ 1 ರವರ ಉತ್ತರ:**
**ಆರೋಪಿ 2 ರವರ ಉತ್ತರ:**
**ಆರೋಪಿ 3 ರವರ ಉತ್ತರ:**
**ಆರೋಪಿ 4 ರವರ ಉತ್ತರ:**
**ಆರೋಪಿ 5 ರವರ ಉತ್ತರ:**
**ಆರೋಪಿ 6 ರವರ ಉತ್ತರ:**
**ಆರೋಪಿ 7 ರವರ ಉತ್ತರ:**
**ಆರೋಪಿ 8 ರವರ ಉತ್ತರ:**

**ಪ್ರಶ್ನೆ 2 : ನೀವು ಈ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಆಗಬೇಕೇ?**

**ಆರೋಪಿ 1 ರವರ ಉತ್ತರ:**
**ಆರೋಪಿ 2 ರವರ ಉತ್ತರ:**
**ಆರೋಪಿ 3 ರವರ ಉತ್ತರ:**
**ಆರೋಪಿ 4 ರವರ ಉತ್ತರ:**
**ಆರೋಪಿ 5 ರವರ ಉತ್ತರ:**
**ಆರೋಪಿ 6 ರವರ ಉತ್ತರ:**
**ಆರೋಪಿ 7 ರವರ ಉತ್ತರ:**
**ಆರೋಪಿ 8 ರವರ ಉತ್ತರ:**

**ಈ ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.**

**(ಮೇಲ್ಕಂಡ ಆರೋಪಿತರ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ ಸರಿ ಇದೆಯೆಂದು ನನ್ನ ಸಮಕ್ಷಮ ಖಾತ್ರಿಪಡಿಸಿಕೊಂಡಿರುತ್ತೇನೆ.)**

**(ಶ್ರೀಮತಿ. ಲತಾ .ಜೆ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ., ಮಾಗಡಿ.**

ಆರೋಪಿತರ ಸಹಿ